ಮೈಸೂರು ಲ್ಯಾಂಪ್ಸ್ ಕಾರ್ಖಾನೆಯ ಪುನಶ್ಚೇತನ

575(829) ಶ್ರೀ ಅಶೋಕ್ ಕೆ.ಆರ್ (ಉತ್ತರಹಳ್ಳಿ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಲ್ಯಾಂಪ್ ಕಾರ್ಖಾನೆಯನ್ನು ಮುಚ್ಚಲು ಸರ್ಕಾರ ಯೋಚಿಸುತ್ತಿದೆಯೇ;

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು; ಈ ಕಾರ್ಖಾನೆಯ ಕಳೆದ ನಾಲ್ಕು ವರ್ಷಗಳ ಲಾಭ ನಷ್ಟದ ವಿವರಗಳನ್ನು ನೀಡುವುದು.

ಇ) ಈ ರೋಗಗ್ರಸ್ತ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಲು ಸರ್ಕಾರವು ಯಾವ್ಯಾವ ಯೋಜನೆಯನ್ನು ರೂಪಿಸಿಕೊಂಡಿದೆ.

ಈ) ರಾಜ್ಯದಲ್ಲಿ ಸರ್ಕಾರಿ ಸಂಸ್ಥೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಉಪಯೋಗಕ್ಕೆ ಖಾಸಗಿ ಕ್ಷೇತ್ರದ ಫಿಲಿಪ್ಸ್ ಕಂಪನಿಯ ವಿದ್ಯುತ್ ಉಪಕರಣಗಳನ್ನು ಖರೀದಿಸುವ ಬದಲು ಮೈಸೂರು ಲ್ಯಾಂಪ್ಸ್ ಕಾರ್ಖಾನೆಯ ಉಪಕರಣಗಳನ್ನು ಖರೀದಿಸುವ ಮೂಲಕ ಕಾರ್ಖಾನೆಯನ್ನು ಪುನಶ್ಚೇತನನಗೊಳಿಸುವಲ್ಲಿ ಸರ್ಕಾರದ ನಿಲುವೇನು?

ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ) ಮೈಸೂರು ಲ್ಯಾಂಪ್ಸ್ ಕಾರ್ಖಾನೆಯನ್ನು ರೋಗಗ್ರಸ್ತ ನಿಗಮವೆಂದು ಬಿ.ಐ.ಎಫ್.ಆರ್ ನೊಂದಾಯಿಸಿತು.ಪರಿಶೀಲನೆಯ ನಂತರ ಆದೇಶ ದಿನಾಂಕ: 18.7.2000ರಲ್ಲಿ ನಿಗಮವನ್ನು ಸಮಾಪನಗೊಳಿಸಲು ಸರ್ಕಾರಕ್ಕೆ ನಿರ್ದೇಶನ ನೀಡಿತು. ಅದರಂತೆ, ಸರ್ಕಾರವು ಆದೇಶಸಂಖ್ಯೆ: ಸಿಐ 25 ಸಿಇಎಲ್ 97(ಪಿ-4), ದಿನಾಂಕ: 04.01.2002ರಲ್ಲಿ ಸದರಿ ಕಾರ್ಖಾನೆಯನ್ನು ಕಾನೂನಿನ ಪ್ರಕಾರ ಮುಚ್ಚಿಬಿಡಲು ಆದೇಶ ಹೊರಡಿಸಿದೆ.

ಆ) ಮೈಸೂರು ಲ್ಯಾಂಪ್ಸ್ ಕಾರ್ಖಾನೆಯು ಸೇರಿದಂತೆ ದೇಶದ ಇತರೆ ದೀಪದ ಕಾರ್ಖಾನೆಗಳು ಸಣ್ಣ ಘಟಕಗಳಿಂದ ಕಠಿಣವಾದ ಪೈಪೋಟಿಯನ್ನು ಎದುರಿಸಬೇಕಾಯಿತು. ಇದರ ಪರಿಣಾಮವಾಗಿ ಮೈಸೂರು ಲ್ಯಾಂಪ್ಸ್ ಕಾರ್ಖಾನೆಯ ಚಟುವಟಿಕೆಗಳು ತೀವ್ರವಾಗಿ ಕುಸಿದು, 1993-94 ರಿಂದ ಸತತವಾಗಿ ನಷ್ಟವನ್ನು ಅನುಭವಿಸಬೇಕಾಯಿತು.

ಕಳೆದ ನಾಲ್ಕು ವರ್ಷಗಳಿಂದ ಕಂಪನಿಯು ಅನುಭವಿಸಿದ ನಷ್ಟ ಈ ಕೆಳಕಂಡಂತಿದೆ.

1998-99	10.33
1999-2000	10.28
2000-2001	15.06
2001-2002	16.90

ಇ) ಕಾರ್ಖಾನೆಯನ್ನು ಮುಚ್ಚಿಬಿಡಲು ಆದೇಶಿಸಿರುವುದರಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಈ) ಈಗಾಗಲೇ ಸದರಿ ಸಂಸ್ಥೆಯನ್ನು ಮುಚ್ಚಿಬಿಡಲು ಸರ್ಕಾರವು ಆದೇಶ ಹೊರಡಿಸಿರುವುದರಿಂದ, ಈ ಹಂತದಲ್ಲಿ ಪ್ರಶ್ನೆಯು ಉದ್ಭವಿಸುವುದಿಲ್ಲ.

ಮಂಡ್ಯ ಜಿಲ್ಲೆಯಲ್ಲಿ ವಕ್ಫ್ ಬೋರ್ಡಿನಿಂದ ಕೈಗೊಂಡಿರುವ ಕಾರ್ಯಗಳು

576(802) ಶ್ರೀ ಆತ್ಮಾನಂದ ಎಂ.ಎಸ್ (ಮಂಡ್ಯ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಕ್ಫ್ ಬೋರ್ಡ್ ವತಿಯಿಂದ ಮಂಡ್ಯ ಜಿಲ್ಲೆಯಲ್ಲಿ ಸಾರ್ವಜನಿಕ ಉಪಯುಕ್ತವಾದ ಕಾರ್ಯಗಳನ್ನೇನಾದರೂ ಹಮ್ಮಿಕೊಳ್ಳಲಾಗಿದೆಯೇ?

ಆ) ಕೈಗೊಂಡಿದ್ದಲ್ಲಿ ವಿವರಗಳನ್ನು (ತಾಲ್ಲೂಕುವಾರು) ನೀಡುವುದು.

ಶ್ರೀ ಎಂ.ಎಲ್. ಉಸ್ತಾದ್, (ರಾಜ್ಯ ಸಚಿವರು, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್)

ಅ) ಹೌದು. ಕರ್ನಾಟಕ ರಾಜ್ಯ ವಕ್ಫ್ ಕೌನ್ಸಿಲ್ ವತಿಯಿಂದ ಹಾಗೂ ಕೇಂದ್ರ ವಕ್ಫ್ ಕೌನ್ಸಿಲ್ ನವದೆಹಲಿಯಿಂದ ಧನ ಸಹಾಯ (ಸಾಲ) ಪಡೆದು ಮಂಡ್ಯ ಜಿಲ್ಲೆಯಲ್ಲಿ 7 ವಕ್ಫ್ ಸಂಸ್ಥೆಗಳು ವಾಣಿಜ್ಯ ಸಂಕೀರ್ಣಗಳ ನಿರ್ಮಾಣ ಕಾರ್ಯವನ್ನು ತೆಗೆದುಕೊಂಡಿದ್ದು ಮದ್ದೂರು ತಾಲ್ಲೂಕಿನಲ್ಲಿ ಒಂದು ಕಲ್ಯಾಣ ಮಂಟಪವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಕಟ್ಟಿಸಲಾಗಿದೆ.

ಆ) ತಾಲ್ಲೂಕುವಾರು ವಿವರ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.